# 4

# ಆರೋಗ್ಯ – ಆರೈಕೆ





ದಿನಪತ್ರಿಕೆ

2008 ನವೆಂಬರ್ 25 ಮಂಗಳವಾರ ◆1184 ವೃಶ್ಚಿಕ 10 ◆1429 ದುಲ್‌ಕಅದ್ 26 ◆ಸಂಪುಟ

# ಚಿಕಿತ್ಸೆ ಲಭಿಸದೆ ಬಾಲಕ ಮೃತ್ಯು

[illegible]

❒ ಇಂತಹ ಘಟನೆಗಳಿಗೆ ಕಾರಣಗಳೇನಿರಬಹುದು? ಚರ್ಚಿಸಿ ಲಘು ಟಿಪ್ಪಣಿ ಬರೆಯಿರಿ.

# ರೋಗ ಬಂದಾತು ಜೋಪಾನ

ರೋಗ ಬಂದಾತು ಜೋಪಾನ
ಓ ರಂಗಣ್ಣಾ ... ಓ ತಿಮ್ಮಣ್ಣಾ .... ಓ ನಿಂಗಣ್ಣಾ
ರೋಗ ಬಂದಾತು ಜೋಪಾನ ।।ಪ।।

ಮನೆಯ ಒಳಗೆ ಕಿಟಿಕಿ ಇಲ್ಲ
ಗಾಳಿಬೆಳಕು ಬೀಳಂಗಿಲ್ಲ
ವಾಸದ ಮನೆಯ ಕೊಟ್ಟಿಗೆ ಮಾಡಿ
ಸೊಳ್ಳೆ ತಿಗಣೆ ಬರ್ತಾವಲ್ಲ
ತಿನ್ನೋ ಅನ್ನಕ್ಕೆ ಸೇರಿಕೊಂಡು ನಿನಗೆ ಕಾಯಿಲೆ ತರ್ತಾವಲ್ಲೋ ।।೧।।



ಹೊಲದ ಕೆಲಸ ಮಾಡುತ್ತೀಯಾ
ಕೈಯಾ ಕೆಸರ ಮಾಡ್ಕೋತಿಯಾ
ಹೊತ್ತು ಮೀರಿ ಮನೆಗೆ ಬಂದು
ಕೈಯಾ ತೊಳೆಯದೆ ಉಣ್ಣುತ್ತೀಯಾ
ಮೈಕೈ ಗಾಯ ಆದರೆ ನೀನು ಅಮ್ಮ ಅಂತ ಪೂಜಿಸ್ತೀಯಾ ।।೨।।

ಕಾಲರ ರೋಗ ಬಂದ್ರೆ ನೀನು
ದೇವರಿಗೆಲ್ಲಾ ಹರಕೆ ಹೊತ್ತೆ
ವೈದ್ಯರಿಗೆ ತೋರ್ಸೋದು ಬಿಟ್ಟು
ಮೂಢನಂಬಿಕೆಲಿ ಸಾಯುತ್ತೀಯಾ
ಕಾಯಿಸಿ ಆರಿಸಿದ ನೀರು ಕುಡಿದು ಕಾಯಿಲೆ ಕಳೆಯೋದ್ ಮರೆಯುತ್ತೀಯಾ ।।೩।।

ಊರ ಸುತ್ತ ಸ್ವಚ್ಛಬೇಕು
ಮನೆಯ ಮುಂದೆ ಗಿಡ ನೆಡಬೇಕು
ಶುದ್ಧ ನೀರು ಕುಡಿಯಲೇ ಬೇಕು
ವಿದ್ಯೆ ಬುದ್ಧಿ ಕಲಿಯಲೇ ಬೇಕು
ಆರೋಗ್ಯವನ್ನು ನೋಡ್ಕೊಂಡು ನೀವೇ ಆನಂದದಲಿ ಬಾಳಲೇ ಬೇಕು ।।೪।।

**– ಸಮೂಹ ಸೃಷ್ಟಿ**

- ಕವಿತೆ ಇಷ್ಟವಾಯಿತಲ್ಲವೇ? ಇದನ್ನು ಮುಂದುವರಿಸಿ ಬರೆಯಿರಿ.
- ರೋಗ ಬರದಂತೆ ತಡೆಗಟ್ಟಲು ನಾವೇನು ಮಾಡಬೇಕು ಎಂಬುದರ ಕುರಿತು ಲೇಖನ ತಯಾರಿಸಿರಿ.

❒ ಆರೋಗ್ಯ ಸಂರಕ್ಷಣೆಗೆ ಸಂಬಂಧಿಸಿದ ಇಂತಹ ಘೋಷಣ ವಾಕ್ಯಗಳನ್ನು ಬರೆಯಿರಿ.

**ಪರಿಸರ ಮಲಿನಗೊಳಿಸದಿರಿ**
**ಆರೋಗ್ಯವನ್ನು ಕೆಡಿಸದಿರಿ**

❒ ಆರೋಗ್ಯಕ್ಕೆ ಸಂಬಂಧಿಸಿದ ಕವನಗಳನ್ನು ಸಂಗ್ರಹಿಸಿರಿ.

## ಕಾಸೀಮಜ್ಜ

ಸಂಜೀವ ಮೂರನೇ ತರಗತಿಯಲ್ಲಿ ಓದುತ್ತಿರುವ ಬಾಲಕ. ತಪ್ಪದೇ ದಿನಾಲೂ ಶಾಲೆಗೆ ಹೋಗಿ ಬರುತ್ತಿದ್ದನು. ಆದರೆ ಇತ್ತೀಚೆಗೆ ಸಂಜೆ ಮನೆಗೆ ಬಂದವನೇ ತುಂಬಾ ಸುಸ್ತು ಎಂದು ಮಲಗುತ್ತಿದ್ದ. ಹೀಗಿರಲು ಒಂದು ದಿನ ಹಾಸಿಗೆ ಹಿಡಿದು ಮಲಗಿದ. ತುಂಬಾ ಜ್ವರ ಬಂದಿತ್ತು. ಊಟವಂತೂ ಮಾಡಲೇ ಇಲ್ಲ. ಇದರಿಂದ ಗಾಬರಿಗೊಂಡ ಸಂಜೀವನ ತಾಯಿ ವಿಮಲಾ, ಫೋನು ಮಾಡಿ ಆಫೀಸಿನಿಂದ ಪತಿ ನಾಗರಾಜನನ್ನು ಕರೆಸಿದಳು.





ಅವರಿಗೆ ದಿಕ್ಕೇ ತೋಚದಾಯಿತು. ಮದ್ದು, ಮಾಟ, ಮಂತ್ರದಲ್ಲಿ ಎಳ್ಳಷ್ಟೂ ನಂಬಿಕೆ ಇರದ ನಾಗರಾಜನ ಕಣ್ಣುತಪ್ಪಿಸಿ ವಿಮಲಾ ಹಿತ್ತಿಲ ಆಂಜನೇಯಸ್ವಾಮಿ ದೇವಸ್ಥಾನದಿಂದ ತಾಯಿತವನ್ನು ತಂದು ಕಟ್ಟಿದಳು.

ಆದರೂ ಜ್ವರ ಕಡಿಮೆಯಾಗಿರಲಿಲ್ಲ. ನಾಗರಾಜ ಗಾಬರಿಗೊಂಡಿದ್ದನ್ನು ಕಂಡು ಆತನ ಸ್ನೇಹಿತರು ಬಂದು ಸಾಂತ್ವನ ಹೇಳಿ, "ಹುಬ್ಬಳ್ಳಿಯ ಪಗಡಿ ಓಣಿಯಲ್ಲಿ "ಕಾಸೀಮಜ್ಜ" ಎಂಬ ಮುದುಕನಿದ್ದಾನೆ. ಅವನು ಗಾವಟಿ ಔಷಧ ನೀಡುತ್ತಾನೆ. ಸಂಜೀವನಿಗೆ ಕಾಮಣಿ ಆದಂತೆ ಕಾಣುತ್ತದೆ. ನೀನು ನಾಳೇನೇ ಹುಬ್ಬಳ್ಳಿಗೆ ಹೋಗು" ಎಂದು ಹೇಳಿದರು.

ಮರುದಿನ ಮುಂಜಾನೆಯೇ ಸಂಜೀವನನ್ನು ಕರೆದುಕೊಂಡು ವಿಮಲಾ ಹಾಗೂ ನಾಗರಾಜ ಹುಬ್ಬಳ್ಳಿಯ ಬಸ್ಸು ಹತ್ತಿದರು. ಸ್ವಲ್ಪ ದೂರದ ಪ್ರಯಾಣವಾದದ್ದರಿಂದ ಸಂಜೀವನಿಗೆ ಮತ್ತಷ್ಟು ಆಯಾಸವಾಯಿತು. ಬಿಕ್ಕಲು ಪ್ರಾರಂಭಿಸಿದ. ಇನ್ನೇನು ಮಾಡುವುದು ಎಂದು ನಾಗರಾಜ ಚಿಂತಿಸುತ್ತಿರುವಾಗಲೇ ಹುಬ್ಬಳ್ಳಿ ಬಂದೇಬಿಟ್ಟಿತು.

ನಗರದಲ್ಲಿ ಏನೋ ಗಲಾಟೆ ನಡೆಯುತ್ತಿದೆ ಎಂದು ಬಸ್ಸಿನವರು ನಗರದ ಹೊರವಲಯದಲ್ಲಿಯೇ ಪ್ರಯಾಣಿಕರನ್ನು ಇಳಿಸಿ ಹೋದರು. ತುಂಬಾ ಪ್ರಯಾಸಪಟ್ಟು ಸಂಜೀವನನ್ನು ಹೊತ್ತುಕೊಂಡು ನಾಗರಾಜ ವಿಮಲಾರು ನಗರದಲ್ಲಿ ಬರುತ್ತಿದ್ದಂತೆ ಊರಿನ ತುಂಬಾ ಗಲಾಟೆ ನಡೆದಿತ್ತು. ಒಂದೂ ಬಸ್ಸು, ಆಟೋರಿಕ್ಷಾಗಳು ಓಡಾಡುತ್ತಿರಲಿಲ್ಲ.

ಅಲ್ಲಿಯೇ ಇದ್ದ ಒಬ್ಬ ಪೋಲಿಸ್ "ಏನಯ್ಯಾ ಇಲ್ಯಾಕೆ ನಿಂತಿರುವಿ, ಹಿಂಸಾಚಾರ ಕಣ್ಣಿಗೆ ಕಾಣಿಸುವುದಿಲ್ಲವೇ? ಬೇಗ ಜಾಗ ಖಾಲಿ ಮಾಡು" ಎಂದು ಗದರಿದ. ದಿಕ್ಕುತೋಚದ ನಾಗರಾಜ "ದೂರದ ಕೊಪ್ಪಳದಿಂದ ಇಲ್ಲಿಗೆ ಮಗನಿಗೆ ಔಷಧಿ ಕೊಡಿಸಲು ಬಂದಿದ್ದೇವೆ. ದಯವಿಟ್ಟು ಸಹಾಯ ..." ಎಂದು ಹೇಳುತ್ತಿದ್ದಂತೆಯೇ ಮತ್ತೆ ಪೋಲಿಸ್ ಗದರಿಸಲಾರಂಭಿಸಿದ. ಈ ದೃಶ್ಯವನ್ನು ದೂರದಿಂದಲೇ ನೋಡುತ್ತಿದ್ದ ಎಂ. ಬಿ. ಜೈನ್ ಎಂಬ ಪೋಲಿಸ್ ಅಧಿಕಾರಿ ಓಡಿ ಬಂದು ಪೋಲಿಸನನ್ನು ತಡೆದು ನಾಗರಾಜನನ್ನು ವಿಚಾರಿಸಿದ. "ಹೋ ನನಗೆ ಕಾಸೀಮಜ್ಜ ತುಂಬಾ ಪರಿಚಯದವನು. ಇಲ್ಲಿ ವ್ಯಾಪಕ ಹಿಂಸಾಚಾರ ನಡೆದಿದೆ. ಮಗುವಿಗೆ ತುಂಬಾ ಸೀರಿಯಸ್ಸಾಗಿದೆ" ಎಂದೆನ್ನುತ್ತ ಅವರ ಪೋಲಿಸ್ ವ್ಯಾನಿನಲ್ಲಿಯೇ ಸಂಜೀವ, ವಿಮಲಾ, ಹಾಗೂ ನಾಗರಾಜನನ್ನು ಹತ್ತಿಸಿಕೊಂಡು ಕಾಸೀಮಜ್ಜನ ವಠಾರದ ಮುಂದೆ ಇಳಿಸಿ ಹೊರಟು ಹೋದನು. 'ಇಲ್ಲಿ ನೋಡಿದರೆ ಗಲಾಟೆ ನಡೆದಿದೆ. ಕಾಸೀಮಜ್ಜ ಬಾಗಿಲು ತೆಗೆಯುತ್ತಾನೋ ಇಲ್ಲವೋ' ಎಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತ ನಾಗರಾಜ ಮುರುಕು ಕದವನ್ನು ತಟ್ಟಿದ. ತಕ್ಷಣ ಕದ ತೆಗೆದವನೇ "ಬನ್ನಿ ಬನ್ನಿ" ಎಂದ. ಒಳಗೆ ಕರೆದು ಕದವನ್ನು ಹಾಕಿಬಿಟ್ಟವನೇ ನಾಗರಾಜನ ಹೆಗಲಮೇಲೆ ಇದ್ದ ಸಂಜೀವನನ್ನು ಇಳಿಸಿಕೊಂಡನು. ಮಗುವಿನ ಕಣ್ಣು, ನಾಲಿಗೆ, ಬೆರಳು ಪರೀಕ್ಷಿಸಿದ. "ಇವನಿಗೆ ಕಾಮಣಿಯಾಗಿದೆ ಹೆದರಬೇಡಿರಿ". ಅವನನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು ಕಣ್ಣಲ್ಲಿ ಯಾವುದೋ ಪುಡಿಯನ್ನು ಹಾಕಿ, ಕಷಾಯವನ್ನು ಕುಡಿಸಿ ಮಲಗಿಸಿದನು. "ಏನೂ ಇಲ್ಲ ನಿಮ್ಮ ಮಗನಿಗೆ ಔಷಧಿ ನೀಡಲಾಗಿದೆ. ಇನ್ನೇನು ಅರ್ಧ ತಾಸಿನಲ್ಲಿ ಎದ್ದು ಓಡಾಡುತ್ತಾನೆ. ನೀವು ಪ್ರತಿ ಹದಿನೈದು ದಿನಕ್ಕೊಮ್ಮೆ ಬಂದು ಔಷಧಿಯನ್ನು ಒಯ್ಯಬೇಕಾಗುತ್ತದೆ" ಎಂದನು.

ಅಷ್ಟರಲ್ಲಿಯೇ ಸಂಜೀವ ಎದ್ದು ಕುಳಿತು ನೀರನ್ನು ಬೇಡಿದ. ಎಲ್ಲರೂ ಸಂತೋಷಗೊಂಡರು. "ಸರಿ ಅಜ್ಜಾ ನಿಮ್ಮ ಫೀ ಎಷ್ಟು?" ಎಂದು ನಾಗರಾಜ ಅಂದ. "ನೋಡಿ ನಾನೆಂದೂ ಯಾರಿಂದಲೂ ಹಣ ಇಸಿದುಕೊಂಡಿಲ್ಲ. ನಿಮ್ಮ ಮಗು ಆರಾಮವಾಗಲಿ, ಮುಂದೆ ನೋಡೋಣವಂತೆ" ಅಂದ. "ಆಯಿತು ನಾವು ಬರುತ್ತೇವೆ" ಎಂದು ನಾಗರಾಜ, ವಿಮಲಾ, ಸಂಜೀವ ಹೊರಡಲು ಎದ್ದರು. ಅವರನ್ನು ತಡೆದ ಕಾಸೀಮಜ್ಜ "ಹೊರಗೆ ತುಂಬಾ ಗಲಭೆ

ನಡೆದಿದೆ. ಅಲ್ಲಿ ಹೋಗಿ ಅಪಾಯಕ್ಕೆ ಸಿಲುಕದಿರಿ. ಇವತ್ತು ಇಲ್ಲಿಯೇ ವಸತಿ ಇದ್ದು ಮುಂಜಾನೆ ಗಲಭೆ ಕಡಿಮೆಯಾದರೆ ಹೋಗುವಿರಂತೆ" ಎಂದನು. ಅದಕ್ಕೆ ಸಮ್ಮತಿಸಿದ ನಾಗರಾಜ, ವಿಮಲಾ ಹಾಗೂ ಸಂಜೀವ ಅನಿವಾರ್ಯವಾಗಿ ಅಜ್ಜನ ಮನೆಯಲ್ಲಿಯೇ ಉಳಿಯಲು ನಿರ್ಣಯಿಸಿದರು. ನಂತರ ಊಟ ಮಾಡಿದರು. ಅಲ್ಲಿಯೇ ಮಲಗಿದರು. ಕಾಸೀಮಜ್ಜನ ಆರೈಕೆ, ಸಹಾಯ ಕಂಡು ವಿಮಲಾ, ನಾಗರಾಜ ಇಬ್ಬರೂ ಅಚ್ಚರಿಗೊಂಡರು. ಮರುದಿನ ಎರಡು ವಾರಗಳ ಔಷಧಿಯನ್ನು ಪಡೆದುಕೊಂಡು ಕೊಪ್ಪಳಕ್ಕೆ ಹಿಂತಿರುಗಿದರು. ಹದಿನೈದು ದಿನಗಳಲ್ಲಿಯೇ ಸಂಜೀವ ಸಂಪೂರ್ಣ ಆರಾಮವಾದ. ಇದನ್ನು ಕಂಡು ಸಂತಸಗೊಂಡ ವಿಮಲಾ, ಗಂಡನನ್ನು ಕರೆದು "ಸಂಜೀವನಿಗೆ ಪೂರ್ಣ ಗುಣಮುಖವಾದರೆ ಕಾಸೀಮಜ್ಜನಿಗೆ ದೊಡ್ಡ ಮೊತ್ತದ ಉಡುಗೊರೆಯನ್ನು ಕೊಡುತ್ತೇನೆಂದು ಮನಸ್ಸಿನಲ್ಲಿಯೇ ಸಂಕಲ್ಪ ಮಾಡಿದ್ದೆ. ಏನಾದರೂ ಕೊಡೋಣವೇ" ಎಂದಳು. ಇದರಿಂದ ಖುಷಿಗೊಂಡ ನಾಗರಾಜ "ನಾನೂ ಹಾಗೆ ಅಂದುಕೊಂಡಿದ್ದೆ . ಆದರೆ ಕಾಸೀಮಜ್ಜ ಏನೂ ಉಡುಗೊರೆ ಸ್ವೀಕರಿಸುವುದಿಲ್ಲ" ಎಂದನು. ನಂತರ ನಾಗರಾಜ, ಸಂಜೀವನೊಂದಿಗೆ ಹುಬ್ಬಳ್ಳಿಯ ಅವನ ಮುರುಕು ಮನೆಗೆ ಹೋಗಿ, ಆ ಹಳೆಯ ಮನೆಯನ್ನು ಬಿಚ್ಚಿಸಿ ಹೊಸಮನೆಯೊಂದನ್ನು ಕಟ್ಟಿಸಿಕೊಟ್ಟು ಬಂದನು.

**– ರಾಜೇಂದ್ರ ಎನ್. ಗಡಾದ**

- ❒ ಕಾಸೀಮಜ್ಜನ ಯಾವ ಗುಣಗಳು ನಿಮಗೆ ಮೆಚ್ಚುಗೆಯಾದವು? ಯಾಕೆ?
- ❒ ನಾಗರಾಜ ತನ್ನ ಮಗ ಸಂಜೀವನೊಂದಿಗೆ ವೈದ್ಯರ ಮನೆಗೆ ಭೇಟಿ ನೀಡಿದ ಸಮಯದಲ್ಲಿ ಅವರೊಳಗೆ ನಡೆದ ಮಾತುಕತೆಗಳನ್ನು ಸಂಭಾಷಣ ರೂಪದಲ್ಲಿ ಬರೆಯಿರಿ.
- ❒ ಕಾಸೀಮಜ್ಜನಂತೆ ಗಾವಟಿ ಔಷಧಿ ನೀಡುವವರು ನಿಮ್ಮೂರಲ್ಲಿಯೂ ಇರಬಹುದಲ್ಲವೇ? ಅವರ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆಯಿರಿ.

# ಮದರ್ ಥೆರೆಸಾ



ಅನಾಥರಿಗೆ ರಕ್ಷಣೆ ಕೊಡುವವರಿರಬಹುದು. ಬಡವರಿಗೆ ಕೈಲಾಗುವ ಸಹಾಯ ಮಾಡುವವರೂ ಇರಬಹುದು. ಆದರೆ ರೋಗಿಗಳನ್ನು ಉಪಚರಿಸುವವರು ಅತ್ಯಂತ ವಿರಳ. ಅಂತಹ ವಿರಳ ವ್ಯಕ್ತಿಗಳಲ್ಲಿ ಮದರ್ ಥೆರೆಸಾ ಕೂಡಾ ಒಬ್ಬರು. ಭಾರತದಲ್ಲೆಲ್ಲಾ ಮನೆಮಾತಾಗಿರುವ ಅವರು ಪ್ರೀತಿಯ ದೇವತೆಯಾಗಿದ್ದರು. ಶಾಂತಿಯ ಪ್ರತೀಕವಾಗಿದ್ದರು. ದುಃಖಿಗಳು ಹಾಗೂ ಅನಾಥರ ತಾಯಿಯಾಗಿದ್ದರು. ನಿಸ್ವಾರ್ಥ ಸೇವೆಯ ಮತ್ತೊಂದು ಹೆಸರೇ ಮದರ್ ಥೆರೆಸಾ.

ಮದರ್ ಥೆರೆಸಾರ ಮೊದಲಿನ ಹೆಸರು "ಆಗ್ನೆಸ್ ಗೊಂಕ್ಸಾ ಬೀಜಾಕ್ಸು" ಎಂದಿತ್ತು. ಆಗ್ನೇಸ್‌ಳನ್ನು ಮನೆಯಲ್ಲಿ ಎಲ್ಲರೂ ಗೊಂಕ್ಸಾ ಎಂದೇ ಕರೆಯುತ್ತಿದ್ದರು. ಗೊಂಕ್ಸಾ ಎಂದರೆ ಮೊಗ್ಗು ಎಂದರ್ಥ. ಹಿಂದಿನ ಯುಗೋಸ್ಲಾವಿಯಾದ ಸ್ಕಾಪ್‌ಜಿ ಎಂಬಲ್ಲಿ ಅಲ್ಬೇನಿಯಾ ದಂಪತಿಗಳಿಗೆ ಮಗಳಾಗಿ 1910 ರ ಆಗಸ್ಟ್ 29ರಂದು ಥೆರೆಸಾ ಜನಿಸಿದರು. ಅವರ ತಂದೆ ನಿಕೊಲಾಸ್ ಬೊಜಾಕ್ಸಿಯಾ, ತಾಯಿ ಡ್ರಾನಾ. ಅವರಿಗೆ ಹದಿನೆಂಟು ವರ್ಷ ವಯಸ್ಸಾದಾಗ ಐರ್ಲೆಂಡಿಗೆ ಹೋದರು. ಅಲ್ಲಿ ಲೊರೆಟ್ಟೊ ಸಂಘದಲ್ಲಿ ತರಬೇತಿ ಪಡೆದು ಭಾರತಕ್ಕೆ ಬಂದು ಧರ್ಮಪ್ರಚಾರ ಮಾಡಲು ಪ್ರಾರಂಭಿಸಿದರು.

ಮದರ್ ಥೆರೆಸಾ ಕೊಲ್ಕತ್ತದಲ್ಲಿ ಒಂದು ಚಿಕ್ಕ ಕೊಠಡಿಯಲ್ಲಿ ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. ಕೊಳೆಗೇರಿಯಲ್ಲಿರುವ ಬಡರೋಗಿಗಳನ್ನು ಕರೆತಂದು ಉಪಚರಿಸಲಾರಂಭಿಸಿದರು. 1950ರಲ್ಲಿ ಮಿಶನರೀಸ್ ಆಫ್ ಚಾರಿಟೀಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಬಂಗಾಳದ 'ಅಸನ್‌ಸೋಲ್' ಎಂಬಲ್ಲಿ 'ನಿರ್ಮಲ ಹೃದಯ್' ಎಂಬ ಆಶ್ರಯ ತಾಣವನ್ನು ಸ್ಥಾಪಿಸಿದರು. ಪ್ರಾರಂಭದಲ್ಲಿ ಅವರು ಅನೇಕ ಅಡ್ಡಿಆತಂಕಗಳನ್ನು ಎದುರಿಸಿದರು. ಆದರೆ ಜನರಿಗೆ ಅವರ ನಿಸ್ವಾರ್ಥ ಸೇವೆಯ ಅರಿವು ಮೂಡಿದಾಗ ಪ್ರಪಂಚದಾದ್ಯಂತ ಅವರಿಗೆ ಸಹಾಯಹಸ್ತಗಳು ಚಾಚಿ ಬಂದುವು.

ಕೆಲವೇ ವರ್ಷಗಳಲ್ಲಿ ಭಾರತದಲ್ಲಿ ಶಾಲೆಗಳು, ಆಸ್ಪತ್ರೆಗಳು, ಅನಾಥಾಶ್ರಮಗಳು ಮತ್ತು ಕುಷ್ಠರೋಗಿಗಳ ಸೇವಾಕೇಂದ್ರಗಳು ತಲೆಎತ್ತಿದವು. ಇದರೊಂದಿಗೆ ಒಂದು ಕ್ಷಯರೋಗ ಚಿಕಿತ್ಸಾಲಯ ಮತ್ತು ನಿರಾಶ್ರಿತ ಮಹಿಳೆಯರಿಗಾಗಿ ಒಂದು ಆಶ್ರಮವನ್ನು ಸ್ಥಾಪಿಸಿದರು. 'ಪ್ರೀತಿಯ ಕೊರತೆ, ಅಸಹಾಯಕತೆ ಮತ್ತು ತಾವು ನಿರುಪಯೋಗಿಗಳೆಂಬ ಭಾವನೆ ರೋಗಕ್ಕಿಂತ ಕೆಟ್ಟದ್ದು' ಎಂದು ಅವರು ಭಾವಿಸಿದ್ದರು. ಮದರ್ ಥೆರೆಸಾ ಮತ್ತು ಅವರ ಸಹಾಯಕರು ರಸ್ತೆಗಳಲ್ಲಿ ಅನಾಥರಾಗಿ, ರೋಗಿಗಳಾಗಿ ಸಂಕಟಪಡುತಿದ್ದವರನ್ನು ಗುರುತಿಸಿ, ಅವರನ್ನು ಸೇವಾಕೇಂದ್ರಗಳಲ್ಲಿ ಉಪಚರಿಸತೊಡಗಿದರು. ಔಷಧೋಪಚಾರದಿಂದ ಅವರು ಜೀವನದ ಬಗ್ಗೆ ಭರವಸೆ ಹೊಂದಿ ಬದುಕುವಂತೆ ಮಾಡುತ್ತಿದ್ದರು.

ಮದರ್ ಥೆರೆಸಾರವರ ಸೇವೆಯನ್ನು ಗುರುತಿಸಿ ಅವರಿಗೆ ಸಾಕಷ್ಟು ಪ್ರಶಸ್ತಿಗಳು ಬಂದಿವೆ. 1962ರ ಮ್ಯಾಗ್ಸೆಸೆ ಪ್ರಶಸ್ತಿ, 1979ರ ನೋಬೆಲ್ ಪ್ರಶಸ್ತಿ, 1980ರಲ್ಲಿ ಭಾರತರತ್ನ ಪ್ರಶಸ್ತಿ ಅಲ್ಲದೆ ಮೂರು ಬಾರಿ ವರ್ಷದ ಮಹಿಳೆ






ಎಂಬ ಪ್ರಶಸ್ತಿಯೂ ದೊರೆಯಿತು. ಇಷ್ಟೆಲ್ಲಾ ಗೌರವ, ಪ್ರಶಸ್ತಿಗಳು ದೊರಕಿದರೂ ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿದ್ದ ಅವರು ಇವುಗಳ ಪ್ರಭಾವಕ್ಕೆ ಒಳಗಾಗಲಿಲ್ಲ. ಅನೇಕ ವರ್ಷಗಳ ಸತತ ಸೇವೆಯಿಂದ ಅನೇಕರಿಗೆ ಜೀವತುಂಬಿದ ಮದರ್ ಥೆರೆಸಾ ಅಲ್ಪಕಾಲದ ಅಸ್ವಸ್ಥತೆಯಿಂದ 1997ರ ಸೆಪ್ಟೆಂಬರ್ 5 ರಂದು ಕೊನೆಯುಸಿರೆಳೆದರು. ಮದರ್ ಥೆರೆಸಾ ಕೆಲವು ಆದರ್ಶಗಳನ್ನು ಹೊಂದಿದ್ದರು. "ಮೌನದ ಫಲ ಪ್ರಾರ್ಥನೆ, ಪ್ರಾರ್ಥನೆಯಿಂದ ನಂಬಿಕೆ, ನಂಬಿಕೆಯಿಂದ ಪ್ರೀತಿಯೂ, ಪ್ರೀತಿಯಿಂದ ಸೇವೆಯೂ, ಸೇವೆಯಿಂದ ಶಾಂತಿಯೂ ಪ್ರತಿಫಲವಾಗಿ ದೊರೆಯುತ್ತವೆ." ಎಂದು ಅವರು ನಂಬಿದ್ದರು. ಸುಮಾರು ಐವತ್ತು ವರ್ಷಗಳ ಕಾಲ ಅವರು ಮಾನವ ಜನಾಂಗಕ್ಕೆ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಮದರ್ ಥೆರೆಸಾರಂತಹ ನಿಸ್ವಾರ್ಥ ಸೇವೆಯ ವ್ಯಕ್ತಿಯನ್ನು ದೇಶ ಇನ್ನೂ ಬಯಸುತ್ತಿದೆ ಎನಿಸುವುದು ಸಹಜ. ಏಕೆಂದರೆ ಸೇವೆಯನ್ನಷ್ಟೆ ಅಲ್ಲದೆ ಮಾನವೀಯತೆ, ಕರುಣೆ, ಸೇವಾಭಾವ ಇವುಗಳನ್ನು ಜಗತ್ತು ಯಾವಾಗಲೂ ಬಯಸುತ್ತದೆ ಹಾಗೂ ನೆನಪಿಸಿಕೊಳ್ಳುತ್ತಲೇ ಇರುತ್ತದೆ.

– ಸಾಧಾರ

- ❒ ಮದರ್ ಥೆರೆಸಾರ ಜೀವನದ ಪ್ರಧಾನ ಘಟನೆಗಳನ್ನು ಬರೆಯಿರಿ.
- ❒ ಮದರ್ ಥೆರೆಸಾರಂತೆಯೇ ರೋಗಿಗಳ ಮತ್ತು ಬಡಜನರ ಸೇವೆಯನ್ನು ಮಾಡಿದ ಮಹಾಪುರುಷರು ಬಾಬಾ ಆಮ್ಟೆ. ಅವರ ಜೀವನದ ಕೆಲವು ಪ್ರಧಾನ ಘಟನೆಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ಬಳಸಿಕೊಂಡು ಪರಿಚಯ ಲೇಖನ ತಯಾರಿಸಿರಿ.

**ಬಾಬಾ ಆಮ್ಟೆಯವರ ಜೀವನದ ಕೆಲವು ಪ್ರಧಾನ ಘಟನೆಗಳು**



| | | |
|---|---|---|
| ಪೂರ್ಣ ಹೆಸರು | : | ಮುರಳೀಧರ ದೇವಿದಾಸ ಆಮ್ಟೆ |
| ಜನನ | : | 1914 ಡಿಸೆಂಬರ್ 26. |
| ಸ್ಥಳ | : | ಮಹಾರಾಷ್ಟ್ರದ ವಾರ್ಧಾ ಜಿಲ್ಲೆಯ ಹಿಂಗನ ಘಾಟಿ. |
| ಶಿಕ್ಷಣ | : | ಕಾನೂನು ಪದವಿ |
| ವೃತ್ತಿ | : | ವಕೀಲ |

| | | |
|---|---|---|
| ಹವ್ಯಾಸ | : | ಕುಸ್ತಿ, ಈಜು, ಕುದುರೆ ಸವಾರಿ, ಸಂಗೀತ. |
| ಜೀವನದ ದಿಕ್ಕನ್ನು ಬದಲಾಯಿಸಿದ ಘಟನೆ | : | ಕುಷ್ಠರೋಗಿಯ ಅನಿರೀಕ್ಷಿತ ಭೇಟಿ. |
| ಕುಷ್ಠರೋಗಿಗಳಿಗಾಗಿ ಸ್ಥಾಪಿಸಿದ ಸಂಸ್ಥೆ | : | ಆನಂದವನ ಶ್ರಮಿಕ ವಿದ್ಯಾಪೀಠ. |
| ಸೇವೆ | : | ಕುಷ್ಠರೋಗಿಗಳ ಸೇವೆ, ಬುಡಕಟ್ಟು ಜನರ ಕಲ್ಯಾಣ. |
| ದೊರೆತ ಪ್ರಶಸ್ತಿಗಳು | : | ಪದ್ಮಶ್ರೀ, ಪದ್ಮವಿಭೂಷಣ, ಬಿರ್ಲಾ ಅಂತಾರಾಷ್ಟ್ರೀಯ ಪ್ರಶಸ್ತಿ, ಗಾಂಧಿ ಶಾಂತಿಪ್ರಶಸ್ತಿ ಇತ್ಯಾದಿ. |
| ಮರಣ | : | 94ನೇ ವಯಸ್ಸಿನಲ್ಲಿ (9.2.2008) |

❒ ನಿಮ್ಮ ಪರಿಸರದಲ್ಲಿರುವ ಸಮಾಜ ಸೇವಾ ಸಂಸ್ಥೆಗಳನ್ನು ಹೆಸರಿಸಿರಿ. ಅವುಗಳ ಕುರಿತು ಟಿಪ್ಪಣಿ ತಯಾರಿಸಿರಿ.

## ಸಾಯಿರಾಂ ಭಟ್ಟರೊಡನೆ ಸ್ವಲ್ಪ ಹೊತ್ತು



ಕಾಸರಗೋಡಿನ ಬದಿಯಡ್ಕ ಪಂಚಾಯತಿನ ಕಿಳಿಂಗಾರು ಎಂಬಲ್ಲಿ ವಾಸವಾಗಿರುವ ಶ್ರೀ. ಕೆ. ಎನ್. ಗೋಪಾಲಕೃಷ್ಣ ಭಟ್ಟರು 'ಸಾಯಿರಾಂ ಭಟ್ಟ'ರೆಂದೇ ಪ್ರಸಿದ್ಧರಾಗಿದ್ದಾರೆ. ಉತ್ತಮ ಸಮಾಜಸೇವಕರಾಗಿರುವ ಇವರ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

ಸಂದರ್ಶಕ : ನಮಸ್ಕಾರ. ನೀವೊಬ್ಬ ಉತ್ತಮ ಸಮಾಜ ಸೇವಕರೆಂದು ತಿಳಿದಿದ್ದೇನೆ. ನಿಮ್ಮ ಸಮಾಜ ಸೇವೆಗೆ ಪ್ರೇರಣೆ ಏನು?

ಸಾಯಿರಾಂ ಭಟ್ : ಭಗವಾನ್ ಶ್ರೀ ಸತ್ಯಸಾಯಿಯವರೇ ನನ್ನ ಸಮಾಜಸೇವೆಗೆ ಪ್ರೇರಣೆ. ಬಡತನ ನಿರ್ಮೂಲನ, ಎಲ್ಲರಿಗೂ ಆರೋಗ್ಯ, ವಿದ್ಯಾಭ್ಯಾಸ, ವಾಸಕ್ಕೆ ಮನೆ, ಕುಡಿಯಲು ನೀರು ಇವು ಬಾಬಾರವರ ಮುಖ್ಯ ಸೇವೆಗಳು. ನಾನೂ ಅದೇ ಸೇವೆಯಲ್ಲಿ ನನ್ನನ್ನು ತೊಡಗಿಸಿಕೊಂಡಿದ್ದೇನೆ. ಸುಮಾರು ಹದಿನೈದು ವರ್ಷಗಳಿಂದ ಉಚಿತ ವೈದ್ಯಕೀಯ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿದ್ದೇನೆ.

ಸಂದರ್ಶಕ : ಈ ಶಿಬಿರ ಆರಂಭವಾದ ಹಿನ್ನೆಲೆ, ಸ್ವಲ್ಪ ತಿಳಿಸುತ್ತೀರಾ?

ಸಾಯಿರಾಂ ಭಟ್ : ಸಾಯಿಬಾಬರ ಜನ್ಮದಿನದಂದು ಸಾರ್ವಜನಿಕರಿಗೆ ಪ್ರಯೋಜನವಾಗುವ ಯಾವುದಾದರೊಂದು ಸೇವೆ ಮಾಡಬೇಕೆಂದು ಯೋಚಿಸಿ, ವೈದ್ಯಕೀಯ ಶಿಬಿರ ನಡೆಸಲು ತೀರ್ಮಾನಿಸಿದೆವು. ಒಂದು ದಿನ ಶಿಬಿರ ನಡೆಸಿದರೆ ಬಂದ ಬಡರೋಗಿಗಳಿಗೆ ಮುಂದೇನು ಗತಿ? ಅದಕ್ಕಾಗಿ ವಾರಕ್ಕೊಂದು ದಿನ ಶಿಬಿರ ನಡೆಸಲಾಯಿತು. 1996 ಜನವರಿ 8 ರಂದು ಆರಂಭವಾದ ಶಿಬಿರ ಇಂದಿನ ವರೆಗೂ ಮುಂದುವರಿದುಕೊಂಡು ಬಂದಿದೆ.

ಸಂದರ್ಶಕ : ಈ ಶಿಬಿರದಲ್ಲಿ ಯಾವ ರೀತಿಯ ರೋಗಿಗಳಿಗೆ ಔಷಧಿ ದೊರಕುತ್ತದೆ? ಔಷಧಿಗಾಗಿ ಯಾರೆಲ್ಲ ಬರುತ್ತಾರೆ?

ಸಾಯಿರಾಂ ಭಟ್ : ಇಲ್ಲಿ ಎಲ್ಲಾ ರೀತಿಯ ಖಾಯಿಲೆಗಳಿಗೂ ಔಷಧೋಪಚಾರ ಸಿಗುತ್ತದೆ. ರೋಗಕ್ಕೆ ಜಾತಿ ಭೇದವಿಲ್ಲವಷ್ಟೆ? ಹಿಂದುಗಳು, ಕ್ರೈಸ್ತರು, ಮುಸಲ್ಮಾನರು, ಬಡವರು, ಬಲ್ಲಿದರು, ಉದ್ಯೋಗಸ್ಥರು, ನಿರುದ್ಯೋಗಿಗಳು ಹೀಗೆ ಎಲ್ಲಾ ವರ್ಗದವರೂ ಬಂದು ಔಷಧಿಯನ್ನು ಪಡೆಯುತ್ತಾರೆ.

ಸಂದರ್ಶಕ : ನೀವು ಸ್ವತಃ ವೈದ್ಯರಾಗಿ ಖಾಯಿಲೆಗಳಿಗೆ ಔಷಧಿಗಳನ್ನು ಕೊಡುತ್ತೀರಾ?

ಸಾಯಿರಾಂ ಭಟ್ : ಹೌದು. ನಮ್ಮದು ಪರಂಪರೆಯಿಂದಲೇ ವೈದ್ಯ ಹಾಗೂ ಪುರೋಹಿತ ಮನೆತನ. ಕೆಲವು ರೋಗಗಳಿಗೆ ಕೇವಲ ಔಷಧ ಸಾಲದು. ಪ್ರಾರ್ಥನೆಯೂ ಬೇಕು. ನಾನು ದೇವರನ್ನು ಪ್ರಾರ್ಥಿಸಿ ಖಾಯಿಲೆಗೆ ತಕ್ಕ ಔಷಧಿಯನ್ನು ಕೊಡುತ್ತೇನೆ. ಪ್ರಾರ್ಥನೆಯೂ ಔಷಧಿಯೂ ಸೇರಿದಾಗ ಖಾಯಿಲೆ ಗುಣವಾಗುತ್ತದೆ ಎಂಬುದು ನನ್ನ ನಂಬಿಕೆ.

ಸಂದರ್ಶಕ : ನೀವು ಕೊಡುವ ಔಷಧೋಪಚಾರಕ್ಕೆ ಶುಲ್ಕವೇನಾದರೂ ಇದೆಯೇ?

ಸಾಯಿರಾಂ ಭಟ್ : ಇಲ್ಲ. ಇದು ನಮ್ಮ ಉಚಿತ ಸೇವೆ. ಉದ್ಯೋಗವಲ್ಲ. ದೇವರ ಸೇವೆಯಲ್ಲಿ ಲಾಭದ ಲೆಕ್ಕಾಚಾರವಿಲ್ಲ. ಮನಸ್ಸಿಗೆ ಸಂತೋಷ, ತೃಪ್ತಿ, ಧನ್ಯತಾಭಾವ. ಹೆಚ್ಚು ಜನರು ರೋಗಮುಕ್ತರಾಗಿ ಸುಖಿಗಳಾದರೆ ಅದೇ ಸಂತೋಷ. ಇಲ್ಲಿಗೆ ಬಂದವರು ನಿರಾಶರಾಗಿ ಮರಳಿದ್ದು ನನ್ನ ಅನುಭವದಲ್ಲಿಲ್ಲ.

ಸಂದರ್ಶಕ : ನಿಮ್ಮ ಇನ್ನೊಂದು ಮುಖ್ಯ ಸೇವೆಯೆಂದರೆ ಬಡಜನರಿಗೆ ಗೃಹ ನಿರ್ಮಾಣವೆಂದು ತಿಳಿಯಿತು. ಆ ಕುರಿತು ಸ್ವಲ್ಪ ಮಾಹಿತಿಯೊದಗಿಸುತ್ತೀರಾ?

ಸಾಯಿರಾಂ ಭಟ್ : ಮನೆಯಿಲ್ಲದವರಿಗೆ ಇದುವರೆಗೆ 149 ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇನೆ. ಮೂರು ಮನೆಗಳು ಈಗ ನಿರ್ಮಾಣದ ಹಂತದಲ್ಲಿವೆ. ಜಾತಿ ಮತ ಭೇದವಿಲ್ಲದೆ, ಅರ್ಹತೆಯಿರುವವರಿಗೆ ಮನೆ ಕಟ್ಟಿಸಿ, ಬೀಗದ ಕೈ ಹಸ್ತಾಂತರಿಸುತ್ತೇನೆ.

ಸಂದರ್ಶಕ : ವಸತಿ ವ್ಯವಸ್ಥೆ ಮಾತ್ರವಲ್ಲ, ಕುಡಿಯುವ ನೀರಿನ ಅನುಕೂಲತೆಗಳನ್ನೂ ಒದಗಿಸಿದ್ದೀರಿ ಎಂದು ಕೇಳಿದ್ದೇವೆ. ಆ ಕುರಿತು ತಿಳಿಸುವಿರಾ?

ಸಾಯಿರಾಂ ಭಟ್ : ಗ್ರಾಮಪಂಚಾಯತಿನ ಸ್ವಜಲಧಾರಾ ಯೋಜನೆಯಲ್ಲಿ ನೀರು ವಿತರಣೆಯ ವ್ಯವಸ್ಥೆಯಿದೆಯಷ್ಟೆ? ಅದನ್ನು ಕೆಲವೆಡೆಗಳಲ್ಲಿ ವ್ಯಾಪಕಗೊಳಿಸಲು ಪ್ರಯತ್ನಿಸಲಾಗಿದೆ. ಕೆಲವು ಮನೆಗಳಿಗೆ ನಮ್ಮ ಮನೆಯಿಂದಲೇ ಪೈಪಿನ ಮೂಲಕ ನೀರು ಕೊಡಲಾಗಿದೆ.

ಕೊಳವೆ ಬಾವಿಗಳನ್ನು ತೋಡಿ ಸುಮಾರು ನೂರು ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಸಂದರ್ಶಕ : ಶಿಕ್ಷಣ ಕ್ಷೇತ್ರದಲ್ಲಿ ನಿಮ್ಮ ಸಾಧನೆಯೇನು?

ಸಾಯಿರಾಂ ಭಟ್ : ನನ್ನ ವ್ಯವಸ್ಥಾಪಕತ್ವದಲ್ಲಿರುವ ಕಿಳಿಂಗಾರು ಶಾಲೆಯಲ್ಲಿ ಹಲವಾರು ವರ್ಷಗಳಿಂದ ಒಂದನೇ ತರಗತಿಯ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರವನ್ನು ಒದಗಿಸುತ್ತಿದ್ದೇನೆ. ಎಲ್ಲಾ ತರಗತಿಗಳಲ್ಲಿ ಅಗತ್ಯವಿರುವ ಮಕ್ಕಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ನೀಡುತ್ತೇನೆ. ಕಂಪ್ಯೂಟರ್, ಪ್ರಯೋಗ ಶಾಲೆ, ಉತ್ತಮ ಗ್ರಂಥಾಲಯ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಅಡುಗೆ ಕೋಣೆ, ಹೊಸ ಕಟ್ಟಡ, ನೂತನ ಆಟದ ಬಯಲು ಇತ್ಯಾದಿ ಸೌಕರ್ಯಗಳನ್ನು ಸರಕಾರದ ಅನುದಾನವಿಲ್ಲದೆಯೇ ಏರ್ಪಡಿಸಲಾಗಿದೆ.

ಸಂದರ್ಶಕ : ನೀವು ಮಾಡುವ ಎಲ್ಲಾ ಸೇವೆಗಳಿಗೆ ಬೇಕಾದ ಖರ್ಚು ವೆಚ್ಚಗಳನ್ನು ಹೇಗೆ ನಿಭಾಯಿಸುತ್ತೀರಿ?

ಸಾಯಿರಾಂ ಭಟ್ : ನಮಗೆ ಸ್ವಲ್ಪ ಕೃಷಿಭೂಮಿ ಇದೆ. ಅದರಿಂದ ಬರುವ ಆದಾಯಕ್ಕೆ, ನನ್ನಿಂದ ಪ್ರಯೋಜನ ಪಟ್ಟವರು ಕೊಟ್ಟ ದೇಣಿಗೆಯನ್ನೂ ಸೇರಿಸಿ, ಯೋಜನೆಗಳ ಖರ್ಚುವೆಚ್ಚಗಳನ್ನು ನಿಭಾಯಿಸುತ್ತೇನೆ.

ಸಂದರ್ಶಕ : ಕಿರಿಯರಿಗೆ ನಿಮ್ಮ ಕಿವಿಮಾತೇನು?

ಸಾಯಿರಾಂ ಭಟ್ : ಉದ್ದೇಶ ಒಳ್ಳೆಯದಾಗಿದ್ದರೆ ಫಲ ನಿಶ್ಚಿತ. ಆರೋಗ್ಯ ಕೊಟ್ಟಿರುವಾಗ ಯಾಕೆ ದುಡಿಯಬಾರದು? ಎಲ್ಲರೂ ಚೆನ್ನಾಗಿ ದುಡಿಯಬೇಕು. ಭಾರತದ ಪ್ರಜೆ ಸೋಮಾರಿಯಾಗಬಾರದು. ಇದು ಕಿರಿಯರಿಗೆ ನಾನು ಕೊಡುವ ಸಂದೇಶ. ಹಿರಿಯರು ಕೂಡಾ ಸಂಪತ್ತು ಕೂಡಿಟ್ಟು ಮಕ್ಕಳನ್ನು ಸೋಮಾರಿಗಳಾಗಿ ಮಾಡಬಾರದು. ಇದೇ ನನ್ನ ಜೀವನದ ದೃಷ್ಟಿ.

- ❒ ಸಾಯಿರಾಂ ಭಟ್ಟರು ಯಾವ ಯಾವ ಕ್ಷೇತ್ರಗಳಲ್ಲಿ ಏನೆಲ್ಲಾ ಸೇವೆಗಳನ್ನು ಮಾಡಿರುತ್ತಾರೆ? ಸಂಕ್ಷೇಪಿಸಿ ಬರೆಯಿರಿ.
- ❒ ಉತ್ತಮ ಸಮಾಜಸೇವಕರಾದ ಸಾಯಿರಾಂ ಭಟ್ಟರ ಸಾಧನೆಗಳಿಗೆ ಮೆಚ್ಚುಗೆಯನ್ನು ಸೂಚಿಸಿ ಅವರಿಗೆ ಒಂದು ಪತ್ರ ಬರೆಯಿರಿ.
- ❒ ಆರೋಗ್ಯಕ್ಷೇತ್ರದಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸಿದ ವ್ಯಕ್ತಿಗಳು ನಿಮ್ಮ ಊರಿನಲ್ಲಿಯೂ ಇರಬಹುದಲ್ಲವೆ? ಅವರ ಜೊತೆ ಸಂದರ್ಶನ ನಡೆಸಲು ಅಗತ್ಯವಾದ ಪ್ರಶ್ನಾವಳಿ ತಯಾರಿಸಿರಿ. ಸಂದರ್ಶನ ನಡೆಸಿ, ವರದಿ ತಯಾರಿಸಿರಿ.



❐ ನೀವು ಕಲಿತು ಡಾಕ್ಟರರಾದರೆ ಯಾವ ರೀತಿ ಸಮಾಜಸೇವೆ ಮಾಡಬಯಸುತ್ತೀರಿ? ಊಹಿಸಿ ಬರೆಯಿರಿ.

❐ ಮಾದರಿಯಂತೆ ಕೆಳಗಿನ ವಾಕ್ಯಗಳನ್ನು ಬದಲಾಯಿಸಿ ಬರೆಯಿರಿ.

| |
|---|
| ಮಾದರಿ :<br>○ ದೇವರ ಸೇವೆಯಲ್ಲಿ ಲಾಭದ ಲೆಕ್ಕಾಚಾರವಿಲ್ಲ.<br>○ ವಿಪರೀತ ಮಳೆಯಿಂದಾಗಿ ಭತ್ತದ ಕೃಷಿಯಲ್ಲಿ ತುಂಬಾ ನಷ್ಟವುಂಟಾಯಿತು. |

- ಹೆಚ್ಚು ಜನರು ರೋಗ ಮುಕ್ತರಾಗಿ ಸುಖಿಗಳಾದರೆ ಅದೇ ಸಂತೋಷ.
- ....................................................................................................
- ಕೊಳವೆ ಬಾವಿಗಳನ್ನು ತೋಡಿ ಸುಮಾರು ನೂರು ಮನೆಗಳಿಗೆ ನೀರಿನ ವ್ಯವಸ್ಥೆ ಮಾಡಲಾಗಿದೆ.
- ....................................................................................................
- ಎಲ್ಲ ತರಗತಿಗಳಲ್ಲಿಯೂ ಅಗತ್ಯವಿರುವ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ನೀಡುತ್ತಿದ್ದೇನೆ.
- ....................................................................................................
- ಉದ್ದೇಶ ಒಳ್ಳೆಯದಾಗಿದ್ದರೆ ಫಲ ನಿಶ್ಚಿತ.
- ............................................................

❖❖❖